



# ಶಿವಾಜಿಯ ಮೇಲೆ ವಿಠಲನ ಕೃಪೆ

**ಕಥೆ : ಟಿ.ಎಂ. ಸುಂದರರಾಮನ್** **ಚಿತ್ರ : ಗೋವಿ**










4

ಅದರಿಂದ ಏನು ಹಾನಿ? ನಮ್ಮ ರಾಜನನ್ನು ಹಿಡಿಯುವುದು ಅಷ್ಟು ಸುಲಭವೆ? ನಮ್ಮ ರಾಜನ ಶೌರ್ಯ, ಪರಾಕ್ರಮ ನೋಡಿ ಶತ್ರು ರಾಜ ನಿಜವಾಗಿಯೂ ದಂಗಾಗಿದ್ದಾನೆ.




5

ಶಿವಾಜಿ ದೇವಾಲಯಕ್ಕೆ ಭೇಟಿ ನೀಡಿದ ಸುದ್ದಿಯನ್ನು ಕೆಲವು ಮಂದಿ ವಂಚಕರು ಶತ್ರುಗಳಿಗೆ ತಲುಪಿಸಿದರು. ಅವನನ್ನು ಸೆರೆ ಹಿಡಿಯಲು ಇದೇ ತಕ್ಕ ಸಮಯವೆಂದು ತಿಳಿದ ಶತ್ರುಗಳು, ಅದಕ್ಕಾಗಿ ದೊಡ್ಡ ಸೈನ್ಯವನ್ನು ಸಿದ್ಧಪಡಿಸಿದರು.

6

ದೇವಾಲಯದಲ್ಲಿ ಭಜನೆ ನಡೆಯುತ್ತಿರಬೇಕಾದರೆ ಶಿವಾಜಿಯ ಅಂಗರಕ್ಷಕನು ಬಂದು ಗುಟ್ಟಾಗಿ ಹೇಳಿದ ...





7


ಶಿವಾಜಿ ಕೂಡಲೇ ತುಕಾರಾಮನ ಬಳಿಗೆ ಹೋಗಿ, ಅಲ್ಲಿಂದ ಹೊರಡಲು ಸಿದ್ಧನಾದ.




8
ಶಿವಾಜಿಗೆ ತುಂಬಾ ಗುರುಭಕ್ತಿಯಿತ್ತು . ಅವನಿಗೆ ತನ್ನ ಗುರುವಿನ ಆಣತಿಯನ್ನು ಮೀರಲಾಗಲಿಲ್ಲ. ತನ್ನ ಮನಸ್ಸಿನ ಶಕ್ತಿಯನ್ನೆಲ್ಲ ಒಗ್ಗೂಡಿಸುತ್ತ ...
ಏನು ಆಗುವುದೋ ಅದೆಲ್ಲವೂ ದೇವರ ಇಚ್ಛೆಯಂತೆ. ನನ್ನ ಗುರುವಿನ ಮಾತನ್ನು ನಾನು ಮೀರಲಾರೆ.


9
ಇದೇನಿದು? ನಮ್ಮ ರಾಜನು ತಾನಾಗಿಯೇ ಅಪಾಯದಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದಾನೆ.
ಸರಿ, ಮಹಾರಾಜನು ತನ್ನ ಗುರುವಿನ ಮಾತನ್ನು ಮೀರಲಾರ. ನಾವು ರಾಜನ ಆಜ್ಞೆಯನ್ನ ಮೀರಲಾರೆವು. ನಮ್ಮ ರಕ್ತದ ಕೊನೆಯ ಹನಿ ಉಳಿದಿರುವ ವರೆಗೂ ರಾಜನ ರಕ್ಷಣೆಗಾಗಿ ನಾವು ಹೋರಾಡೋಣ.


10
ತುಕಾರಾಮನು ಭಕ್ತಿ ತುಂಬಿ ಭಜನೆ ಮಾಡುತ್ತಿದ್ದ. ಅಷ್ಟರಲ್ಲಿ ಅವನ ಶಿಷ್ಯ ಅಲ್ಲಿಗೆ ಬಂದ...
ಸ್ವಾಮಿ, ಕ್ಷಮಿಸಿ, ನಮ್ಮ ರಾಜ ತುಂಬ ಅಪಾಯದಲ್ಲಿದ್ದಾನೆ. ಅವನನ್ನು ಸೆರೆ ಹಿಡಿಯಲು ಶತ್ರುಗಳು ಬೃಹತ್ತಾದ ಸೈನ್ಯದೊಂದಿಗೆ ಬಂದು ಸುತ್ತುವರಿದಿದ್ದಾರೆ.
ಹೌದೆ? ಅವನು ಇಲ್ಲೇ ಇರುವಂತೆ ಮಾಡಿದವನು ನಾನು. ಅವನು ಎಲ್ಲ ಅಪಾಯವನ್ನೂ ಮರೆತು ಭಜನೆ ಮಾಡುತ್ತಿದ್ದಾನೆ. ಅಂಥ, ಶೂರನಿಗೆ ಏನಾದರೂ ಆಗಿಬಿಟ್ಟರೆ? ಅಯ್ಯೋ ದೇವರೇ! ...


11
ತುಕರಾಮನು ಕಣ್ಣೀರು ತುಂಬಿಕೊಂಡು ವಿಠಲನನ್ನು ಪ್ರಾರ್ಥಿಸಿದ.
ವಿಠಲಾ! ನೀನು ನರಸಿಂಹನ ರೂಪದಲ್ಲಿ ಬಂದು ಪ್ರಹ್ಲಾದನನ್ನು ಕಾಪಾಡಿದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಮಹಾರಾಜನನ್ನು ಕಾಪಾಡಬೇಕಾದವನು ನೀನೇ. ಅವನು ನಿನ್ನನ್ನೇ ನಂಬಿದ್ದಾನೆ.
ಪ್ರಾರ್ಥನೆ ಮಾಡುತ್ತ ತುಕಾರಾಮನು ನಾಲ್ಕು ಅಭಂಗಗಳನ್ನು ಹಾಡಿದ.

**12** ಅಷ್ಟರಲ್ಲಿ ಒಂದು ಪವಾಡ ನಡೆಯಿತು. ಎಲ್ಲ ದಿಕ್ಕುಗಳಿಂದಲೂ ಭಕ್ತರನ್ನು ಶತ್ರುಗಳ ಸೈನ್ಯ ಆವರಿಸಿಬಿಟ್ಟಿತು. ವಿಠಲನು ಶಿವಾಜಿಯ ವೇಷ ಧರಿಸಿ ಕುದುರೆಯ ಮೇಲೇರಿ, ಮಿಂಚಿನಂತೆ ಹೊರಗೆ ನುಗ್ಗಿದನು. ಶತ್ರುಗಳು ಅವನನ್ನು ಬೆನ್ನಟ್ಟಿ ಹೋದರು. ವಿಠಲನು ಅವರನ್ನು ಮರಳುಗೊಳಿಸಿ, ಮೂರು ಗಂಟೆ ಕಾಲ ಸತಾಯಿಸಿದನು. ಕೊನೆಗೆ ಅವನು ಮುಳ್ಳುಕಂಟಿಗಳಿಂದ ತುಂಬಿದ್ದ ಕಾಡನ್ನು ಹೊಕ್ಕು, ಶತ್ರುಗಳನ್ನು ಗೊಂದಲಕ್ಕೀಡುಮಾಡಿದನು.



**13** ಅಷ್ಟರಲ್ಲಿ ನಿಜವಾದ ಶಿವಾಜಿಯು ತುಕಾರಾಮನ ಆಶೀರ್ವಾದ ಪಡೆದು, ಅಲ್ಲಿಂದ ತಪ್ಪಿಸಿಕೊಂಡನು.



**14** ವಿಠಲನ ಕರುಣೆಯನ್ನು ನೆನೆದು ತುಕಾರಾಮನಿಗೆ ಆನಂದಬಾಷ್ಪವುಂಟಾಯಿತು.







"ಆಧ್ಯಾತ್ಮಿಕ ಸಾಧನೆ ಮಾಡದೆ ಕರ್ಮಯೋಗವನ್ನು ಮಾಡಲು ಸಾಧ್ಯವಿಲ್ಲ. ನಾಲ್ಕು ಬಗೆಯ ಯೋಗಗಳನ್ನೂ ನೀವು ಸಮನ್ವಯಗೊಳಿಸಬೇಕು. ಇಲ್ಲದಿದ್ದರೆ ನಿಮ್ಮ ಮನಸ್ಸು ಹಾಗೂ ಹೃದಯಗಳನ್ನು ಸಂಪೂರ್ಣವಾಗಿ ಭಗವಂತನಲ್ಲಿ ಯಾವಾಗಲೂ ಇಡುವುದು ಹೇಗೆ ಸಾಧ್ಯ ?

ಪ್ರಕೃತಿ ಯಾವಾಗಲೂ ನಮ್ಮನ್ನು ಪ್ರತಿಕ್ರಿಯೆ ನೀಡಲು ಪ್ರೇರೇಪಿಸುವುದು. ಏಟಿಗೆ ಏಟು, ಮೋಸಕ್ಕೆ ಮೋಸ, ಸುಳ್ಳಿಗೆ ಸುಳ್ಳು. ಹೀಗೆ ಇವುಗಳನ್ನು ನಮ್ಮ ಎಲ್ಲ ಶಕ್ತಿಯಿಂದ ಹಿಂದಿರುಗಿಸಲು ಅದು ಬಯಸುವುದು. ಹಾಗೆ ತಿರುಗೇಟು ಕೊಡದಿರಲು, ನಿಯಂತ್ರಣದಲ್ಲಿ ಇಡಲು, ಅನಾಸಕ್ತಿಯಿಂದ ಇರಲು ಅಸಾಧಾರಣ ದೈವೀಶಕ್ತಿ ಬೇಕಾಗುವುದು." *— ಸ್ವಾಮಿ ವಿವೇಕಾನಂದ*

